ಮೊಣಕೈ ಮೇಲೆ ಒರಗಿಕೊಂಡು ಬರೆಯುತ್ತೇನೆ. ಆ ರೂಮಿನಲ್ಲಿ ಮಲಗುವುದಿಲ್ಲ. ಹಾಗಾಗಿ, ಹೋಟೆಲ್‌ನ ಸಿಬ್ಬಂದಿಗಳಿಗೆ ಹಾಸಿಗೆಯ ಬೆಡ್‌ಶೀಟ್ ಬದಲಿಸಲು ಬಿಡುವುದಿಲ್ಲ. ಮಧ್ಯಾಹ್ನ ಹನ್ನೆರಡೂವರೆ ಇಲ್ಲವೆ ಒಂದೂವರೆವರೆಗೆ ಅಲ್ಲಿರುತ್ತೇನೆ. ಆಮೇಲೆ ಮನೆಗೆ ಹೋಗಿ ಉಳಿದ ಕೆಲಸಗಳನ್ನು ಮಾಡುತ್ತೇನೆ. ರಾತ್ರಿ ಒಳ್ಳೆ ಅಡುಗೆ ಮಾಡಿ ಊಟ ಮಾಡುತ್ತೇನೆ. ಮತ್ತೆ ಮಾರನೆಯ ದಿನ ಬೆಳಗ್ಗೆ ಕೆಲಸಕ್ಕೆ ಮರಳುತ್ತೇನೆ. ಕೆಲವೊಮ್ಮೆ ಹೋಟೆಲು ರೂಮಿನಲ್ಲಿ ನಾನು ಹೋಗುವ ಹೊತ್ತಿಗೆ, "ಮೇಡಂ ಬೆಡ್‌ಶೀಟುಗಳನ್ನು ಬದಲಿಸಲು ಅನುಮತಿ ಕೊಡಿ. ಅದು ಬಹಳ ಗಲೀಜಾಗಿರಬೇಕು" ಎನ್ನುವ ಚೀಟಿ ಕಾದಿರುತ್ತದೆ. ಅವರಿಗೆ ಕೇವಲ ಕಸದಬುಟ್ಟಿ ಸ್ವಚ್ಛಮಾಡಲು ಅನುಮತಿ ನೀಡುತ್ತೇನೆ. ಗೋಡೆಯ ಮೇಲೆ ಏನೂ ಇರಬಾರದು ಎಂದು ಹೇಳಿ ಎಲ್ಲವನ್ನೂ ತೆಗೆಸಿಬಿಡುತ್ತೇನೆ. ರೂಮಿನೊಳಗೆ ಹೋಗುತ್ತಿದ್ದಂತೆ ನನ್ನನ್ನ ಹಿಡಿದಿಡುವಂತಹದ್ದು ಏನೂ ಇರಬಾರದು. ನನ್ನೆಲ್ಲ ನಂಬಿಕೆಗಳನ್ನು ರೂಮಿನಿಂದ ಹೊರಗೆ ಬಿಟ್ಟು ಬಂದಿರುತ್ತೇನೆ. ಹೂಗಳಾಗಲಿ, ಬೇರೆ ಯಾವ ರೀತಿಯ ವಸ್ತುಗಳೂ ಅಲ್ಲಿರಬಾರದು. ಎಲ್ಲವನ್ನೂ ಅನುಭವಿಸಬೇಕು. ಬರೆಯುವಾಗ ಅವು ನೆನಪಾಗಬೇಕು ಅಷ್ಟೇ. ಏನಾದರೂ ಓದುತ್ತೇನೆ. ಬೈಬಲ್‌ನ ಪ್ರಾರ್ಥನೆಗಳನ್ನು ಇಲ್ಲವೆ ಡನ್ಬಾರ್, ಜೇಮ್ಸ್ ವೆಲ್ಡನ್ ಜಾನ್ಸನ್‌ನನ್ನು ಓದುತ್ತೇನೆ. ಆ ಭಾಷೆಯ ಸೌಂದರ್ಯವನ್ನು ಆಸ್ವಾದಿಸುತ್ತೇನೆ. ಭಾಷೆ ಮೈತಳೆದ ಬಗೆಯನ್ನು ಕಂಡು ಖುಷಿಯಾಗುತ್ತದೆ. ಬರೆಯಲು ಆರಂಭಿಸುತ್ತೇನೆ. ನಥಾನಿಯಲ್ ಹಾಥಾರ್ನ್ ಒಂದೆಡೆ "ಸುಲಭದ ಓದು ಎನ್ನುವುದು ಬಹಳ ಕಷ್ಟಕರವಾದ ಬರವಣಿಗೆ'' ಎನ್ನುತ್ತಾನೆ. ಭಾಷೆಯನ್ನು ಹಾಗೆ ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ಅದು ಓದಲು ಸುಲಭವಾಗಿರಬೇಕು. ಆದರೆ, ಆ ರೀತಿ ಬರೆಯುವಷ್ಟರಲ್ಲಿ ಸತ್ತುಹುಟ್ಟಿರುತ್ತೇನೆ. ಈ ನ್ಯೂಯಾರ್ಕ್ ವಿಮರ್ಶಕರು, "ಮಾಯಾ ಏಂಜೆಲೊ ಹೊಸ ಪುಸ್ತಕ ಬಂದಿದೆ. ಚೆನ್ನಾಗಿದೆ. ಆಕೆ ಬಹಳ ಸಹಜವಾಗಿ ಬರೆಯುತ್ತಾರೆ" ಎಂದಾಗ ನನಗೆ ಅವರ ಕತ್ತಿನಪಟ್ಟಿ ಹಿಡಿದು ಬಗ್ಗಿಸಿ, ನೆಲಕ್ಕೆ ಮೂಗು ಉಜ್ಜಿಸಬೇಕೆನ್ನಿಸುತ್ತದೆ. ಯಾಕೆಂದರೆ, ಹಾಗೆ ಬರೆಯುವ ಕಷ್ಟ ನನಗೆ ಗೊತ್ತು. ನನ್ನ ಕೆಲಸ ನಿಂತಿರುವುದೇ ಭಾಷೆಯ ಮೇಲೆ. ಈ ಸಂಜೆ ಈ ಸಭಾಂಗಣದಲ್ಲಿ ನಾನು ನೋಡುತ್ತಿರುವುದನ್ನು ಬರೆಯಬೇಕೆಂದುಕೊಂಡರೆ ಇಲ್ಲಿನ ಕೆಂಪು ಕುರ್ಚಿಗಳು, ಕುರ್ಚಿಗೆ ಒರಗಿ ಕೂತ ಜನ, ಅವರ ಮುಖದ ಮೇಲೆ ಬೀಳುತ್ತಿರುವ ಬೆಳಕು, ಅವರು ಕೂತ ಭಂಗಿ ಇವೆಲ್ಲ ವಿವರಗಳು ನನ್ನೊಳಗೆ ಇಳಿಯಬೇಕು. ರೂಮಿನೊಳಗೆ ನಾಲ್ಕೈದು ಗಂಟೆ ಕೂತು ಬರೆದಾಗ ಆ ದೃಶ್ಯ ಭಾಷೆಯಲ್ಲಿ ಮೈದಳೆಯಬೇಕು. ಇಷ್ಟನ್ನು ವರ್ಣಿಸಲು ನನಗೆ ಎರಡು ಮೂರು ವಾರಗಳಾದರೂ ಬೇಕು.

◆ ಎಷ್ಟು ಬಾರಿ ತಿದ್ದಿ ಬರೆಯುವಿರಿ?

ಬೆಳಗಿನ ಹೊತ್ತು ಬರೆಯುತ್ತೇನೆ. ಬರೆದು ಸುಸ್ತಾಗಿ ಮಧ್ಯಾಹ್ನ ಮನೆಗೆ ಹೋಗಿ ಸ್ನಾನ ಮಾಡುತ್ತೇನೆ. ಆಮೇಲೆ ಅಂಗಡಿಗೆ ಹೋಗಿ ಸಾಮಾನು ತಂದು ಒಳ್ಳೆಯ ಅಡುಗೆ ಮಾಡಿ ಊಟಮಾಡುತ್ತೇನೆ. ಮನೆಗೆ ಯಾರಾದರೂ ಅತಿಥಿಗಳು ಬಂದರೆ ಕ್ಯಾಂಡಲ್, ಸಂಗೀತ ಹೀಗೆ ಎಲ್ಲ ಸಿದ್ಧತೆಗಳನ್ನು ಮಾಡುತ್ತೇನೆ. ಆಮೇಲೆ ಪಾತ್ರೆಗಳನ್ನೆಲ್ಲ ಎತ್ತಿಟ್ಟು ಬೆಳಗ್ಗೆ ಬರೆದದ್ದನ್ನು ಓದುತ್ತೇನೆ. ಒಂಬತ್ತು ಪುಟಗಳಷ್ಟನ್ನು ಬರೆದಿದ್ದರೆ ಅದರಲ್ಲಿ ಎರಡೂವರೆ ಇಲ್ಲವೆ ಮೂರು ಪುಟಗಳಷ್ಟನ್ನು ಉಳಿಸಿಕೊಳ್ಳುತ್ತೇನೆ. ಹೀಗೆ ಐವತ್ತು ಪುಟಗಳಷ್ಟು ಉಳಿಸಿಕೊಂಡರೆ ಹೆಚ್ಚು.

1967ರಿಂದ ನನ್ನ ಸಂಪಾದಕರು ಬದಲಾಗಿಲ್ಲ. ಅವರು ಹಲವು ಸಾರಿ 'ನೀವು ಯಾಕೆ ಕೋಲನ್ (:) ಜಾಗದಲ್ಲಿ ಸೆಮಿಕೋಲನ್ (;) ಬಳಸ್ತಿರಾ?' ಅಂತ ಕೇಳಿದ್ದಾರೆ. ನಾನು ಕೂಡ ಅವರಿಗೆ ಬೇಕಾದಷ್ಟು ಸಲ 'ಈ ಜನ್ಮದಲ್ಲಿ ಮತ್ತೆ ನಿಮ್ಮ ಜೊತೆ ಮಾತಾಡೋಲ್ಲ' ಅಂತ ಹೇಳಿದಿನಿ. ಎಷ್ಟೋ